For more job news visit : www.kpscvaani.com

ನೂತನ ವಿದ್ಯಾಲಯ ಸಂಸ್ಥೆಯ ಕಾರ್ಯಾಲಯ, ಕಲಬುರಗಿ-585103

ಸಂ:EST/APPT/AP/GIA/DC/26/2023-2024 ದೂರವಾಣಿ ಸಂಖ್ಯೆ : 08472-223248 ದಿನಾಂಕ:10-11-2023

ಅಧಿಸೂಚನೆ

ಈ ಅಧಿಸೂಚನೆಯು ನ್ಯಾಯಾಲಯದ W.P.No.201376/2023ನ ಅಂತಿಮ ತೀರ್ಪಿನ ಪರತ್ತಿಗೊಳಪಟ್ಟಿರುತ್ತದೆ.

ಅನುದಾನಿತ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಆಹ್ವಾನ ("NAAC" ಸಂಸ್ಥೆಯಿಂದ "A" Grade ಮಾನ್ಯತೆ ಪಡೆದಿದೆ)

ನೂತನ ವಿದ್ಯಾಲಯ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಖಾಸಗಿ ಅನುದಾನಿತ ನೂತನ ವಿದ್ಯಾಲಯ ಕಲಾ ಶ್ರೀ ಕನ್ಯಯ್ಯಾಲಾಲಮಾಲು ವಿಜ್ಞಾನ ಹಾಗು ಡಾ:ಪಾಂಡುರಂಗರಾವ್ ಪತ್ಕಿ ವಾಣಿಜ್ಯ ಮಹಾವಿದ್ಯಾಲಯ, ಕಲಬುರಗಿಯಲ್ಲಿ ಖಾಲಿಯಿರುವ ಅನುದಾನಿತ ವಿಭಾಗದ ವಿವಿಧ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಮಾನ್ಯ ಆಯುಕ್ತರು, ಕಾಲೇಜು ಶಿಕ್ಷಣ ಆಯುಕ್ತ ಕಛೇರಿ, ಬೆಂಗಳೂರು ಇವರ ಪತ್ರಗಳ (1) ಸಂಖ್ಯೆ:ಕಾಶಿಇ/36/ಹೈಕ/ರಾವೃಂ/ಖಾಹುಭ/ಗುವಿ/2018-20219, ನೇವಿ-2, ದಿನಾಂಕ 28-03-2023 ಹಾಗು (2) ಸಂಖ್ಯೆ:ಕಾಶಿಇ/112/ಹೈಕ/ಮೀಸಲಾತಿ/2016-2017/ನೇವಿ-2, ದಿನಾಂಕ 28-03-2023, ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ, ಇವರ ಪತ್ರ ಸಂಖ್ಯೆ: ಕಾಶಿಇ/ಪ್ರಾಕಕ/1309/ಖಾಹುಭ/03/2022-23/4417 ಮತ್ತು 4416 ದಿನಾಂಕ 31-03-2023 ಕ್ರಮವಾಗಿ ನಿರ್ದೇಶನದಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಮಿಕ್ಕುಳಿದ ವೃಂದ

ಕ್ರ ಸಂ.	ವಿಷಯ	ಹುದ್ದೆ ಹೆಸರು	ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳ ಸಂಖ್ಯೆ	ಮಿಕ್ಕುಳಿದ ವೃಂದದಲ್ಲಿ ಭರ್ತಿ ಮಾಡಬೇಕಾದ ಹುದ್ದೆಗಳಿಗೆ ನಿಗದಿಪಡಿಸಿರುವ ಮೀಸಲಾತಿ
1	ಇಂಗ್ಲೀಷ	ಸಹಾಯಕ ಪ್ರಾಧ್ಯಾಪಕರು	01	ವಿಕಲ್ಪತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)
2	ದೈಹಿಕ ಶಿಕ್ಷಣ ನಿರ್ದೇಶಕರು	ಸಹಾಯಕ ಪ್ರಾಧ್ಯಾಪಕರು	01	ವಿಕಲ್ಪತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)

ಕ.ಕ.ವೃಂದ

ಕ್ರ ಸಂ.	ವಿಷಯ	ಹುದ್ದೆ ಹೆಸರು	ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಖಾಲಿ ಯಿರುವಹುದ್ದೆಗಳ ಸಂಖ್ಯೆ	ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದಲ್ಲಿ ಭರ್ತಿ ಮಾಡಬೇಕಾದ ಹುದ್ದೆಗಳಿಗೆ ನಿಗದಿಪಡಿಸಿರುವ ಮೀಸಲಾತಿ
1	ಕನ್ನಡ	ಸಹಾಯಕ ಪ್ರಾಧ್ಯಾಪಕರು	02	ಪ.ಜಾ. 01 , - ಸಾ.ಅ. 01
2	ರಾಜ್ಯಶಾಸ್ತ್ರ	ಸಹಾಯಕ ಪ್ರಾಧ್ಯಾಪಕರು	01	ವಿಕಲ್ಪತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)
3	ಇತಿಹಾಸ	ಸಹಾಯಕ ಪ್ರಾಧ್ಯಾಪಕರು	01	ವಿಕಲ್ಪತಿ ವಿಭಾಗ (ಮೀಸಲಾತಿ ಅನ್ವಯಿಸುವುದಿಲ್ಲ)

ನಿಬಂಧನೆಗಳು :-

01) ಅರ್ಜಿಯನ್ನು ತಮ್ಮ ಪೂರ್ಣ ಸ್ವವಿವರ (ಭಾವಚಿತ್ರದೊಂದಿಗೆ) ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದೃಢೀಕೃತ ಪ್ರತಿಗಳು ಹಾಗು ಮೀಸಲಾತಿಯ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಜಾತಿ ಪ್ರಮಾಣಪತ್ರದ, 371(ಎ)ಪ್ರಮಾಣಪತ್ರ(ಅಗತ್ಯವಿದಲ್ಲಿ) ದೃಢೀಕೃತ ಪ್ರತಿಗಳೊಂದಿಗೆ ರೂ.3,000/- (ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ರೂ.2,000/-) ಡ್ಯಾಂಕ್ ಹುಂಡಿಯನ್ನು Secretary, Nutan Vidyalaya Society, Kalaburagi ಇವರಿಗೆ ಸಂದಾಯವಾಗುವಂತೆ ಪಡೆದು ಎಲ್ಲಾ ದಾಖಲೆಗಳನ್ನು ಕಾರ್ಯದರ್ಶಿ, ನೂತನ ವಿದ್ಯಾಲಯ ಸಂಸ್ಥೆ, ಎಸ್.ಬಿ.ಟೆಂಪಲ್ ರೋಡ, ಕಲಬುರಗಿ-585103 ಇಲ್ಲಿಗೆ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ 21 ದಿನಗಳ ಒಳಗಾಗಿ ರಿಜಿಸ್ಟರ್ ಅಥವಾ ಸ್ಪೀಡ್‌ಪೋಸ್ಟ್ ಮೂಲಕ ತಲುಪಿಸುವುದು. ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸುವುದು.

02) ವಯೋಮಿತಿ : ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ಇವರಿಗೆ ಗರಿಷ್ಠ 45 ವರ್ಷ, ಇತರೆ ಹಿಂದುಳಿದ ವರ್ಗ ಗರಿಷ್ಠ 43 ವರ್ಷ ಮತ್ತು ಸಾಮಾನ್ಯ ವರ್ಗ ಗರಿಷ್ಠ 40 ವರ್ಷಗಳು.

03) ವಯೋಮಿತಿಯಲ್ಲಿ ಸಡಲಿಕೆ : ದಿನಾಂಕ 13-12-2018ರ, ಸಂಖ್ಯೆ :ED/87/UPC/2016ರ ಸರ್ಕಾರದ ಸೇವ್ಪಡೆ ಆದೇಶದನ್ವಯ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನಂತೆ ವಯೋಮಿತಿಯನ್ನು ನಿಗದಿಪಡಿಸುವುದರೊಂದಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಯನ್ನು ನೀಡಲಾಗುವುದು (ಸಂಬಂಧಿತ ಪ್ರಾದೇಶಿಕ ಜಂಟಿನಿರ್ದೇಶಕರು ಹಾಗು ಕಾಲೇಜು ಶಿಕ್ಷಣ ಆಯುಕ್ತರು ದೃಢೀಕರಿಸಿದ ಪ್ರಮಾಣ ಪತ್ರದ ಅವಶ್ಯಕತೆ ಇರುತ್ತದೆ).

03) ವಿದ್ಯಾರ್ಹತೆ : ಸಂಬಂಧಪಟ್ಟ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕ ಪಡೆದು ತೇರ್ಗಡೆಯಾಗಿರಬೇಕು (ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಠ 50% ಅಂಕಗಳು) ಹಾಗು NET/SLET ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕೋರ್ಸ್‌ವರ್ಕ್ ಮೂಲಕ Ph.D ಪದವಿ ಪಡೆದ ಅಭ್ಯರ್ಥಿಗಳಿಗೆ NET/SLET ಪರೀಕ್ಷೆಯಿಂದ ವಿನಾಯಿತಿ ನೀಡಲಾಗುವುದು. ಒಂದು ವೇಳೆ ದಿನಾಂಕ 11-07-2019ರ ಪೂರ್ವದಲ್ಲಿ Ph.D ಪದವಿ ಪಡೆದಿದ್ದಲ್ಲಿ/Ph.Dಗೆ ನೊಂದಣಿ ಮಾಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ 04-05-2016ರ UGC ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಪರತ್ತುಗಳಿಗೆ ಒಳಪಟ್ಟಿರುತ್ತದೆ. ದಿನಾಂಕ 11-07-2019ರ ನಂತರದ ಯಾವುದೇ ನೇಮಕಾತಿಗೆ M.Phil ವಿದ್ಯಾರ್ಹತೆ ಪರಿಗಣಿಸುವುದಿಲ್ಲ.

04) ವೇತನ ಶ್ರೇಣಿ ಮತ್ತು ಇತರೆ ನಿಬಂಧನೆಗಳು : UGC ನಿಯಮಾವಳಿ ಮತ್ತು ಸರ್ಕಾರದ ಆದೇಶದನ್ವಯ ಇರುತ್ತದೆ.

05) ಈಗಾಗಲೇ ಸರ್ಕಾರಿ / ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ತಾವು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯಿಂದ ನಿರಾಪೇಕ್ಷಣಾ ಪತ್ರವನ್ನು ಒದಗಿಸಬೇಕು.

06) ಸರ್ಕಾರ ಹಾಗು ಗಿಉಆ ನಿಯಮಾವಳಿಗಳ ಪ್ರಕಾರ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

07) ಅಪೂರ್ಣವಾದ ಹಾಗು ಕಡೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

08) ಆಯ್ಕೆ ಪ್ರಕ್ರಿಯೆಯನ್ನು ಯಾವುದೇ ಹಂತದಲ್ಲಾದರೂ ಅಥವಾ ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ರದ್ದುಪಡಿಸುವ ಅಧಿಕಾರ ಇಲಾಖೆ / ಸರ್ಕಾರವು ಹೊಂದಿರುತ್ತದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವ ಹಾಗು ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಯ ನೇಮಕಾತಿ ಹಕ್ಕು ಎಂದು ಪರಿಗಣಿಸುವಂತಿಲ್ಲ.

09) ಯಾವುದೇ ಕಾರಣಕ್ಕೂ ನೀವು ಸಲ್ಲಿಸಿರುವ ಅರ್ಜಿ ಶುಲ್ಕವನ್ನು ಹಿಂತಿರುಗಿಸುವುದಿಲ್ಲ.

10) ಅರ್ಜಿದಾರರು ಒಂದು ನಕಲು ಪ್ರತಿಯನ್ನು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ-585102 ಇವರಿಗೆ ಕಳುಹಿಸಬೇಕು.

11) ಸಂದರ್ಶನ ದಿನಾಂಕವನ್ನು ನಂತರ ತಿಳಿಸಲಾಗುವುದು ಹಾಗು ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ತರಹದ TA/DA ಕೊಡಲಾಗುವದಿಲ್ಲ.

12) ಹೆಚ್ಚಿನ ಮಾಹಿತಿ ಮತ್ತು ಅರ್ಜಿ ನಮೂನೆ ಡೌನ್‌ಲೋಡ್‌ಗಾಗಿ ಸಂಸ್ಥೆಯ ವೆಬ್‌ಸೈಟ ನೋಡಬಹುದು: www.nutanvidyalaya.org

ಸಹಿ /- ಕಾರ್ಯದರ್ಶಿ, ನೂತನ ವಿದ್ಯಾಲಯ ಸಂಸ್ಥೆ, ಕಲಬುರಗಿ.